doc-558
T-P-2

Reg No B G 155 8 — 10 —72

In The State **First Golden Jubilee Celebrated Paper 'Satyavadi' daily, Mysore 4**

56 th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಪೂರೈಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಸ್ಥ ಚಾರನಿರತ ಎಂ. ಎಸ್. ಕೃಷ್ಣರಾವ್ [8 ಪೈಸೆ

ಗೋಧಿ ಪದಾರ್ಥಗಳ ವಾಪಾರ ಸರಕಾರದ ವಶಕ್ಕೆ ಪಡೆವ ನಿರ್ಧಾರ

ಶಿ ರ

ಗಾಂಧಿ ವಾಣಿ

— ಹಿಂದುಗಳ ಪವಿತ್ರ ಜೀವಿಯಾದ ಗೋವು ಪ್ರಪಂಚದಲ್ಲಿ ಹತ್ಯೆಗೆ ಅತಿ ಸುಲಭಸಾಧ್ಯವಾಗಿರುವುದು ಎಷ್ಟೊಂದು ಶೋಚನೀಯವು ಗೋಸಂರಕ್ಷಣೆಯ ತತ್ವವನ್ನು ಸ್ವರಾಜ್ಯಕ್ಕಾಗಿ ಕೂಡ ನಾನು ಬಿಟ್ಟು ಕೊಡಲಾರೆ.

★

ಅ ಮ ರ

ಸತ್ಯವ ಸಾರುತ
ಅಹಿಂಸೆ ಬೋಧಿಸುತ
ಶಾಂತಿದೂತ–ರಾಷ್ಟ್ರಪಿತ
ಬರುತಿಹನು ಗಾಂಧಿ ತಾತ

ಶಾಂತಿಯಲ್ಲೇ ನಡೆಯುತಾ
ಎಲ್ಲರಿಗೂ ಎಡೆಯನ್ನೀಯುತಾ
ದೇಶಭಕ್ತನಾಗಿ ಎಲ್ಲರಿಗೂ ಬೇಕಾಗಿ
ಬರುತಿಹನು ಗಾಂಧಿ ತಾತ....

ಯಾವ ಅಸ್ತ್ರವೂ ತೊಡದೆ
ಯಾರಿಗೂ ನೋವ ಮಾಡದೆ
ಸತ್ಯಾಗ್ರಹದಿಂದಲೇ
ರಾಜ್ಯವ ಪಡೆದನಲ್ಲೇ....
ಗುಂಡಿಗೆ ಬಲಿಯಾಗಿ
ಪ್ರಾಣವ ತಾನೀಗಿ
ದೇಶಭಕ್ತರ ಮುನ್ನಡಿಯಾಗಿ
ನಡೆದ ಗಾಂಧಿ ತಾತ
ಅಮರ ಎಂದೆಂದಿಗೂ ಅಮರ

— ಜಿ ಪ್ರಕಾಶ [ವಾಸವಿ]

★

ಬಸ್‌ನವರ ಮುಷ್ಕರ

ಬೆಂಗಳೂರಿನಿಂದ ಬಂದಿರುವ ವರದಿಯ ಪ್ರಕಾರ ಸರ್ಕಾರಿ ನಾರಿಗೆ ಸಂಸ್ಥೆ ನೌಕರರು ತಮ್ಮ ಕೇಳಿಕೆಯ ಒತ್ತಾಯಕ್ಕಾಗಿ 13 ನೇ ತಾ. ಮುಷ್ಕರ ಹೂಡುವರು

● ಹಕ್ಕು ಬಾಧ್ಯತಾ ಅರ್ಜಿವಿಚಾರಣೆ 30 ರಿಂದ ಸ್ವಾರಂಭವಾಗ ವುದು

ಪ್ರವಾಸ ಸಂಸ್ಥೆಗೆ ಸ್ಥಳ

ಬೆಂಗಳೂರು— ಅಖಿಲಭಾರತ ಪ್ರವಾಸ ಸಂಸ್ಥೆಗೆ ಸರಕಾರ ಮಾನಿಕ್‌ವೇಲೂ ವ್ಯಾಪ್ತಿಯನ್ನೂ ಅದರ ಸುತ್ತಮುತ್ತಲಲ್ಲಿನ ಪ್ಯಾಲೇಸ್ ರೋಡಿನಲ್ಲಿಯ ಸ್ಥಳವನ್ನೂ ಕೊಡಲು ಒಪ್ಪಿರುವುದಾಗಿ ಪ್ರವಾಸ ಮಂತ್ರಿ ಶ್ರೀ ಅಜೀಜ್ ಸೇಟ್ ಹೇಳಿದರು - ಆ ನಿವೇಶನವನ್ನು ಭಾರತ ಪ್ರವಾಸ ಸಚಿವೆಗೆ ತಿಸುವುದಾಗಿ ಹೇಳಿದರು.

★

ವಿಶ್ವಸುಂದರಿ

ಟೋಕಿಯೊ— ಬ್ರಿಟನ್ನಿನ 20 ವರ್ಷದ ಲಿಂಡಾ ಹಅಕ್ಸ್ ವಿಶ್ವಸುಂದರಿಯಾಗಿ ಆಯ್ಕೆಯಾದಳು.

★

ಬೃಂದಾವನ

ಕೃಷ್ಣರಾಜಸಾಗರದ ಅತಿ ಮನೋಹರ ಮನಃಸ್ಪರ್ಶನೆಯ ಬೃಂದಾವನ ತೋಟದಲ್ಲಿ ನವೀನ ರೀತಿಯ ಸುಂದರ ದೀಪಾಲಂಕಾರ ಏರ್ಪಡಿಸಲಾಗುವದೆಂದು ಪ್ರವಾಸ ಮಂತ್ರಿ ಶ್ರೀ ಅಜೀಜ್‌ಸೇಟ್‌ರವರು ಹೇಳಿದರು ; ಈ ಕಾರ್ಯಕ್ಕೆ ಕೇಂದ್ರದಿಂದ ರೂ. 35 ಲಕ್ಷ ವಿನಂತಿಸಲಾಗುವುದೆಂದೂ ಹೇಳಿದರು – ಬಾದಾಮಿ ಗುಹೆಗಳಲ್ಲಿ ಅಥವಾ ಶ್ರೀರಂಗಪಟ್ಟಣದಲ್ಲಿ ಐ ಫಿಲಿಂಗ್ ಸ್ಟಾಎಟ್ ಲುಮಿಯರ್ ಡಿನೈಸ್ ಸ್ಥಾಪಿಸಲಾಗುವುದೆಂದು ಹೇಳಿದರು.

ಸರ್ಕಾರದ ವಶಕ್ಕೆ ವ್ಯಾಪಾರ

ಮೈದಾ, ರವೆ, ಅಟ್ಟ ಹಾಗೂ ಗೋಧಿಯ ಹಿಟ್ಟು ವ್ಯಾಪಾರವನ್ನು ನವೆಂಬರು 20 ರಿಂದ ಸರ್ಕಾರ ವಹಿಸಿಕೊಳ್ಳುವುದು ಅವುಗಳ ವ್ಯಾಪಾರವನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ಸರ್ಕಾರವೇ ನಡೆಸುವುದು. ಹೊಟೇಲಿನವರಿಗೆ ಪ್ರತ್ಯೇಕ ಪರ್ಮಿಟ್ಟನ್ನು ಕೊಡಲಾಗುವುದು.

ಎಂತಹ ಮುಟ್ಠಾಳ ಕೆಲಸ !

ಮಗನನ್ನು ಸಾಯಿಸಿ, ತಾನೂ ಸತ್ತ !

ಬಾಂಡ (ಉ. ಪ್ರ)— ಕಾವಾರ್ಸಿ ಗ್ರಾಮದ ಮೋತೀಲಾಲ್ ಎಂಬಾತನು ಹಾವನ್ನು ಎರಡು ಭಾಗವಾಗಿ ಕತ್ತರಿಸಿ ಮತ್ತೆ ಜೋಡಿಸುವ ಖ್ಯಾತಿ ಪಡೆದಿದ್ದನು; ಮಾನವನ ಮೇಲೂ ಈ ಪ್ರಯೋಗ ನಡೆಸುವ ಆಶೆಯಿಂದ, ತನ್ನ ಮಗನನ್ನು ಇಟ್ಟಿಗೆ ಸುಡುವ ಸ್ಥಳಕ್ಕೆ ಕರೆದುಕೊಂಡುಹೋಗಿ ಪೂಜೆ ನಡೆಸಿ ಅವನ ತಲೆಯನ್ನು ಕತ್ತರಿಸಿದನು ; ನಂತರ ಶರೀರಕ್ಕೆ ತಲೆಯನ್ನು ಸೇರಿಸಲು ಸಾಧ್ಯವಾಗದಿರಲು ವ್ಯಸನಾಕ್ರಾಂತನಾಗಿ, ಸರಿಯುವ ರೈಲು ಮುಂದೆ ಬಿದ್ದು ತಾನೂ ಪ್ರಾಣ ಕಳೆದುಕೊಂಡನು.

★

ನೀರಿನ ವ್ಯಾಜ್ಯ

ಬೊಂಬಾಯಿ— ಪ್ರಧಾನಿಯವರ ಸೂಚನೆಯಂತೆ, ಗೋದಾವರಿ ನೀರಿನ ವ್ಯಾಜ್ಯದ ವಿಷಯದಲ್ಲಿ ಮೈಸೂರು, ಮಹಾರಾಷ್ಟ್ರ ಆಂಧ್ರ ಪ್ರದೇಶಗಳ ಮುಖ್ಯ ಮಂತ್ರಿಗಳು ಎ ಐ ಸಿ ಸಿಯಲ್ಲಿ ಚರ್ಚಿಸಲಿರುವರು.

★

ದಸ್ತಗಿರಿ

ಜಯಪುರದಿಂದ ಬಂದಿರುವ ವರದಿಯ ಪ್ರಕಾರ ಮುಷ್ಕರ ಹೂಡಿರುವ ರಾಜಾಸ್ತಾನ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳ ಸಹಾನುಭೂತಿಗಾಗಿ 5 ದಿನಗಳಿಂದ ಅನ್ನ ಸತ್ಯಾಗ್ರಹ ನಡೆಸುತ್ತಿದ್ದ ಜನಸಂಘದ ಲೋಕಸಭೆ ಸದಸ್ಯ ಶ್ರೀ ಲಾಲ್ಕಿರ್ಪಾ ಬಂಧಿತರಾದರು ಹದಿನೈದು ದಿವಸಗಳಿಂದ ಉಪವಾಸ ಹೂಡಿದ್ದ ವಿದ್ಯಾರ್ಥಿ ಸಂಘದ ನಾಯಕರಾದ ಶ್ರೀ ಸುರೇಂದ್ರ ಕುಮಾರರ ಬಂಧನವಾಗಿದೆ.

● ಸಮಯ ಸಾಧಕರನ್ನು ಕಾಂಗ್ರೆಸಿಗೆ ಸೇರಿಸಿಕೊಳ್ಳುವ ಬಗೆಗೆ ಮಂತ್ರಿ ಶ್ರೀ ಬಿ. ಬಸವಲಿಂಗಪ್ಪನವರು ಚಿಕ್ಕಬಳ್ಳಾಪುರದಲ್ಲಿ ತೀವ್ರವಾಗಿ ಟೀಕಿಸಿದರು.

ಪ್ರಧಾನರ ನುಡಿ

ಮಹಾತ್ಮಾ ಗಾಂಧಿಯವರಿಗೆ ಹಿತವೆನಿಸಿದ್ದ ಸಮಾಜವಾದ್ಯಗುರಿಯಿಂದ ಹಿಂತೆಗೆಯುವುದಿಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಿಳಿಸಿರುವರು.

★

ಅನಕ್ಷರತೆ

ನವದೆಹಲಿ— ದೇಶದಲ್ಲಿ 386.7 ಮಿಲಿಯ ಅನಕ್ಷರಸ್ತರಿರುವರೆಂದೂ, ಒಬ್ಬ ವಯಸ್ಕನನ್ನು ಅಕ್ಷರಸ್ತನನ್ನಾಗಿ ಮಾಡಲು ರೂ. 15 ರಿಂದ 40 ರವರೆಗೆ ಖರ್ಚಾಗವದೆಂದೂ ಹೇಳಲಾಗಿದೆ

ನವದೆಹಲಿ— ಸಂಸ್ಕೃತ ಶೋಧನೆಯಲ್ಲಿ ನವೀನತೆ ಮತ್ತು ಆಧುನಿಕ ಪ್ರಜ್ಞಾತ ಮತ್ತು ಅಭಿವೃದ್ಧಿ ಬಗ್ಗೆ ಕೇಂದ್ರ ವಿದ್ಯಾ ಸಚಿವಾಲಯವು ಹೊಸ ಸ್ಕೀಂಗಳನ್ನು ತಯಾರಿಸಿದೆ

● ತಪ್ಪಿತಸ್ಥ ಪೌರಸಭೆಗಳನ್ನು ರದ್ದುಪಡಿಸಿ ಅವುಗಳ ಆಡಳಿತವನ್ನು ಸರ್ಕಾರ ವಹಿಸಿಕೊಳ್ಳುವುದೆಂದು ಪೌಂಡಳಿತ ಮಂತ್ರಿ ಶ್ರೀ ಬಿ. ಬಸವಲಿಂಗಪ್ಪನವರು ಚಿಕ್ಕಬಳ್ಳಾಪುರದಲ್ಲಿ ತಿಳಿಸಿದರು.

ದಸರಾ ಮಹೋತ್ಸವ 1972

ದಿನಾಂಕ 8-10-72 ಮತ್ತು 9-10-72 ರ
ಸಾಂಸ್ಕೃತಿಕ ಹಾಗೂ ಚಲನಚಿತ್ರೋತ್ಸವ ಕಾರ್ಯಕ್ರಮಗಳು
ಸ್ಥಳ : ಕ್ರಾಫರ್ಡ್ ಭವನ ಸಂಜೆ : 6-00 ಘಂಟೆಗೆ

8-10-72 ಖ್ಯಾತ ಚಲನಚಿತ್ರ ತಾರೆ
ಕುಮಾರಿ ಹೇಮವಾಲಿನಿ ಭರತನಾಟ್ಯ

9-10-72 ಶ್ರೀಮತಿ ಎಂ. ಎಲ್. ವಸಂತಕುಮಾರಿ ಕರ್ನಾಟಕ ಸಂಗೀತ
[ಹಾಡುಗಾರಿಕೆ]

ಚಲನಚಿತ್ರಗಳು

ಭಾನುವಾರ 8-10-1972 ಸೋಮವಾರ 9-10-1972

ಸಂಗಮ'

ಬೆಳಿಗ್ಗೆ 10-30
[ಉದ್ಘಾಟನೆ]
ಏಕ್ ಅಧೂರಿ ಕಹಾನಿ (ಹಿಂದಿ)
1972
ಮಧ್ಯಾಹ್ನ 3-30 ಮತ್ತು ರಾತ್ರಿ 8-30
ವಾರ್ ಅಂಡ್ ಪೀಸ್ ಭಾಗ 1
ಯು ಎಸ್ ಎಸ್ ಆರ್ - 1970

ಬೆಳಿಗ್ಗೆ 10-30
ಬ್ಯಾಟಲ್‌ಷಿಪ್ ಪೊಟೆಂಕಿನ್ (ಯು ಎಸ್ ಎಸ್ ಆರ್ / 1925) ಅಂಡ್
ಪ್ಯಾಷನ್ ಆಫ್ ಜೋನ್ ಆಫ್ ಆರ್ಕ್
ಫ್ರಾನ್ಸ್ - 1928
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9-30
ಏಕ್ ಅಧೂರಿ ಕಹಾನಿ - ಹಿಂದಿ

ಪ್ರಭಾ

ಬೆಳಿಗ್ಗೆ 10-30
ಇಂಟೊಲರೆನ್ಸ್
ಯು ಎಸ್ ಎ 1915
ಮಧ್ಯಾಹ್ನ 3-30, ಸಂಜೆ 6-30
ಮತ್ತು ರಾತ್ರಿ 9-30
ಐಸಡೋರ ಯು ಕೆ 1968

ಬೆಳಿಗ್ಗೆ 10-30
ಚಂಡೀದಾಸ್ - ಹಿಂದಿ - 1934
ಮಧ್ಯಾಹ್ನ 3-30, ಸಂಜೆ 6 30
ರಾತ್ರಿ 9 30
ಅನೂರಾಧ - ಹಿಂದಿ - 1960

ಗಾಯತ್ರಿ

ಬೆಳಿಗ್ಗೆ 10-30
ಲೈಟ್ ಆಫ್ ಏಷ್ಯ
ಸೈಲೆಂಟ್ - 1926
ಪ್ರತಿಧ್ವನಿ - ಅಸ್ಸಾಮಿಸ್ - 1959
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9-30
ಭುವನಸೋಮ - ಹಿಂದಿ - 1969

ಬೆಳಿಗ್ಗೆ 10 30
ಎಫ್‌ಟಿಐ ಸ್ಟೂಡೆಂಟ್ ಫಿಲಂಸ್ ಅಂಡ್
ಶಿರಾಜ್ ಸೈಲೆಂಟ್ 1928
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ಪ್ರಿವಿಲೆಜ್ ಯು ಕೆ 1967

ಗಣೇಶ್

ಬೆಳಿಗ್ಗೆ 10-30
ಚಂಡೀದಾಸ್ - ಹಿಂದಿ - 1934
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9-30
ಡಾಲ್ ಫಾಸ್ಟಸ್ - ಯು ಕೆ - 1967

ಬೆಳಿಗ್ಗೆ 10 30
ಆಚ್ಚುತ್ ಕನ್ಯ ಹಿಂದಿ 1936
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ಪಥೇರ್ ಪಾಂಚಾಲಿ
ಬಂಗಾಳಿ 1955

ಶಾಲಿಮಾರ್

ಬೆಳಿಗ್ಗೆ 10-30
ಬೇಡಂ ಕಣ್ಣಪ್ಪ - ಕನ್ನಡ
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9-30
ಎಫ್‌ಟಿಐಐ ಸ್ಟೂಡೆಂಟ್ ಫಿಲಂಸ್
ಅಂಡ್ ತ್ರೀ ಆಫ್ ಡೈಸ್
ಸೈಲೆಂಟ್ 1929

ಬೆಳಿಗ್ಗೆ 10 30
ಬೆಳ್ಳಿಮೋಡ ಕನ್ನಡ
ಮಧ್ಯಾಹ್ನ 3 30 ಸಂಜೆ 6 30
ರಾತ್ರಿ 9 30
ಬೈಸಿಕಲ್ ತೀವ್ಸ್ ಇಟಲಿ 1948

ಚಾಮುಂಡೇಶ್ವರಿ

ಬೆಳಿಗ್ಗೆ 10-30, ಮಧ್ಯಾಹ್ನ 3-30
ಸಂಜೆ 6-30, ರಾತ್ರಿ 9-30
ಗೆಜ್ಜೆಪೂಜೆ - ಕನ್ನಡ

ಬೆಳಿಗ್ಗೆ 10 30
ಹರಿಶ್ಚಂದ್ರ ಕನ್ನಡ
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ಇವಾನ್ಸ್ ಚೈಲ್ಡ್‌ಹುಡ್ -
ಯು ಎಸ್ ಎಸ್ ಆರ್ 1964

ರಣಜಿತ್

ಬೆಳಿಗ್ಗೆ 10-30
ನಕರೆ ಅದೇ ಸ್ವರ್ಗ - ಕನ್ನಡ
ಮಧ್ಯಾಹ್ನ 3-30, ಸಂಜೆ 6-30
ರಾತ್ರಿ 9:30
ದೇವದಾಸ್ - ಹಿಂದಿ - 1935

ಬೆಳಿಗ್ಗೆ 10 30
ಅಣ್ಣ - ತಂಗಿ ಕನ್ನಡ
ಮಧ್ಯಾಹ್ನ 3 30, ಸಂಜೆ 6 30
ರಾತ್ರಿ 9 30
ಚೆಂಬರ್ಫಿ ಮಲೆಯಾಳಂ

ಪ್ರವೇಶ ದರ ರೂ 1-00 ಮತ್ತು ರೂ. 2-00
ಅಷ್ಟೂ ಥಿಯೇಟರ್‌ಗಳಲ್ಲಿ ಟಿಕೆಟ್‌ಗಳು ದೊರೆಯುತ್ತವೆ
ಕಾರ್ಯಕ್ರಮ ಚಿಕ್ಕಪುಟ್ಟ ಬದಲಾವಣೆಗೆ ಒಳಪಟ್ಟಿರುತ್ತದೆ

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore

ವುಡ್‌ಲಾಂಡ್ 6-10-72 ರಿಂದ ಅಮೋಘ 2 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ
ದಿನ 3 ಪ್ರದರ್ಶನಗಳು
ಬೆಳಿಗಿನ ಪ್ರದರ್ಶನ 10-30ಕ್ಕೆ ಮಲ್ಲಿ ವಂಪುವೆ

ಅಪೆರಾ 6 10 72 ರಿಂದ

ಅಪೂರ್ವ ತೆಲುಗು ಚಿತ್ರ

ಇನ್‌ಸ್ಪೆಕ್ಟರ್ ಭಾರ್ಯ

ಪಾತ್ರ : ಕೃಷ್ಣ, ಜ್ಯೋತಿಲಕ್ಷ್ಮಿ, ಚಂದ್ರಕಲ

ಬಂಗ್ಲಾ ದೇಶವು ಗಡಿ ವ್ಯಾಪಾರ ನಿಲ್ಲಿಸಲು ಇಚ್ಛಿಸಿದೆ
ಷಿಲಾಂಗಿನಲ್ಲಿ ಗುಂಡಿನೇಟಿನಿಂದ ಒಬ್ಬ ಸತ್ತು ಮೂವರು ಗಾಯಗೊಂಡರು.